# ಮಾಸ ಭವಿಷ್ಯ

**-ಅರುಣ ಪಿ. ಭಟ್**



**ಮೇಷ:** ಈ ತಿಂಗಳು ನಿಮಗೆ ಶುಭಕರವಾಗಿದೆ. ಹೊಸ ವಾಹನ ವಸ್ತುಗಳ ಕ್ರಯ– ವಿಕ್ರಯಗಳಿಗೆ ಸೂಕ್ತ ಕಾಲ. ಸಾಮಾಜಿಕ ಜೀವನದಲ್ಲಿ ಜನತೆಯ ಗೌರವಕ್ಕೆ ಪಾತ್ರರಾಗಿರುವಿರಿ. ಅನಿರೀಕ್ಷಿತವಾಗಿ ಧನಲಾಭ. ಅಂದುಕೊಂಡ ಕಾರ್ಯವನ್ನು ಮುಂದುವರಿಸಿ. ಶುಭ: 11,23,28. ಅಶುಭ: 15,18,27.

**ವೃಷಭ:** ಧೈರ್ಯ, ಉತ್ಸಾಹ ಮತ್ತು ಆರ್ಥಿಕವಾಗಿ ಉನ್ನತಿಯಾಗುವುದು. ರಾಜಕೀಯ, ಸಾಮಾಜಿಕ ಕ್ಷೇತ್ರದಲ್ಲಿ ಮನ್ನಣೆ. ಕುಟುಂಬದಲ್ಲಿ ಮಂಗಳ ಕಾರ್ಯಕ್ರಮ ನಡೆಯಬಹುದು. ಉನ್ನತ ಪದವೀಧರರಿಗೆ ಸರ್ಕಾರಿ ಕೆಲಸದ ಯೋಗವಿದೆ. ಶುಭ: 12,18,26. ಅಶುಭ: 13,25,28.





**ಮಿಥುನ:** ನೀವು ಹಲವಾರು ಕೆಲಸ ಕಾರ್ಯಗಳನ್ನು ಪರಿಶ್ರಮದಿಂದ ಮಾಡುವಿರಿ. ಷೇರು ಹೋಟೆಲ್ ಉದ್ಯಮದವರಿಗೆ ಮಧ್ಯಮ. ಸಂಬಂಧಿಕರು, ಸ್ನೇಹಿತರು ಮತ್ತು ಆಪ್ತರ ಭೇಟಿ. ಅವರಿಂದ ನಿಮ್ಮ ಕೆಲಸಗಳಿಗೆ ಅನೀರಿಕ್ಷಿತ ಬೆಂಬಲ. ಆರ್ಥಿಕವಾಗಿ ಪ್ರಗತಿ ಹೊಂದುತ್ತೀರಿ. ಶುಭ: 15,18,24. ಅಶುಭ: 14,19,28.

**ಕರ್ಕ:** ಈ ತಿಂಗಳು ನಿಮಗೆ ಮಧ್ಯಮ ಫಲಗಳಿಂದ ಕೂಡಿದೆ. ಉನ್ನತ ಪದವೀಧರರಿಗೆ ಉದ್ಯೋಗ ನಿಮಿತ್ತ ವಿದೇಶ ಪ್ರವಾಸ ಯೋಗವಿದೆ. ಆರ್ಥಿಕವಾಗಿ ತಿಂಗಳಾರಂಭದಲ್ಲಿ ಅನಿಶ್ಚಿತತೆ ಇದ್ದರೂ ತಿಂಗಳ ಕೊನೆಗೆ ಸ್ಥಿರವಾದ ಪ್ರಗತಿಯೊಂದಿಗೆ ನೆಮ್ಮದಿ. ವಿದ್ಯಾರ್ಥಿಗಳಿಗೆ ಯಶಸ್ಸು. ಶುಭ: 10,16,25. ಅಶುಭ: 11,18,27.





**ಸಿಂಹ:** ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಿ, ಆದಾಯ ವೃದ್ಧಿಯಾಗುತ್ತದೆ. ವಾಹನ ಚಲಾಯಿಸುವಾಗ ಎಚ್ಚರಿಕೆಯಿಂದ ಇರಿ. ಉದ್ಯೋಗದ ಸ್ಥಳದಲ್ಲಿ ಉನ್ನತ ಸ್ಥಾನ ಪಡೆಯುವಿರಿ. ನಿಮ್ಮ ಹಿರಿಯ ಅಧಿಕಾರಿಗಳು ಮತ್ತು ಸಹೋದ್ಯೋಗಿಗಳು ಸಂತೋಷ ಪಡುತ್ತಾರೆ. ಶುಭ: 9,12,23. ಅಶುಭ: 14,16,21.

**ಕನ್ಯಾ:** ಕುಟುಂಬ ಜೀವನದಲ್ಲಿ ಅನೇಕ ಬದಲಾವಣೆ ಎದುರಿಸಬೇಕಾಗುತ್ತದೆ.. ಜಮೀನು ಖರೀದಿ ಸಾಧ್ಯತೆ. ದೊಡ್ಡ ನಿರ್ಧಾರಕ್ಕೂ ಮುನ್ನ ಹಿರಿಯರ ಸಲಹೆ ಪಡೆದುಕೊಳ್ಳಿ. ಕುಟುಂಬದ ಸದಸ್ಯರ ನಡುವೆ ಒಗ್ಗಟ್ಟು ಮೂಡುತ್ತದೆ. ಈ ಸಮಯದಲ್ಲಿ ಯಾರಿಗೂ ಸಾಲ ನೀಡದಿರಿ. ಶುಭ: 8,15,21. ಅಶುಭ: 12,16,28.





**ತುಲಾ:** ನೀವು ನಿಮ್ಮ ಉದ್ಯೋಗವನ್ನು ಬದಲಾಯಿಸುವ ಬಗ್ಗೆ ಯೋಚಿಸುತ್ತಿದ್ದರೆ ಈ ಸಮಯದಲ್ಲಿ ನಿಮ್ಮ ಪ್ರಯತ್ನವನ್ನು ವೇಗಗೊಳಿಸಿ. ನೀವು ಯಶಸ್ವಿಯಾಗುವಿರಿ. ವೆಚ್ಚಗಳ ನಿಯಂತ್ರಣ ಅಗತ್ಯವಿದೆ. ನಿಮ್ಮ ಆರೋಗ್ಯ ಸ್ಥಿರವಾಗಿರುತ್ತದೆ ಅವಿವಾಹಿತರಿಗೆ ವಿವಾಹ ಯೋಗ. ಶುಭ: 13,19,27. ಅಶುಭ: 5,12,29.

**ವೃಶ್ಚಿಕ:** ಆರ್ಥಿಕ ಜೀವನವು ಉತ್ತಮವಾಗಿರಲಿದೆ. ಆದಾಯ ಹೆಚ್ಚಲಿದೆ. ವಾಹನ ಅಥವಾ ಮನೆ ಖರೀದಿಸಲು ನಿರ್ಧರಿಸಬಹುದು. ನಿಮ್ಮ ಪೂರ್ವಜರ ಆಸ್ತಿ ಮಾರಾಟದಿಂದ ಲಾಭ ಗಳಿಸುವಿರಿ. ಪೋಷಕರ ಆರೋಗ್ಯವು ಸುಧಾರಿಸುತ್ತದೆ. ಶುಭ: 10,17,26. ಅಶುಭ: 12,18,27.





**ಧನು:** ಕಠಿಣ ಪರಿಶ್ರಮದಿಂದ ಅಪೇಕ್ಷಿತ ಫಲಿತಾಂಶ ಪಡೆಯಲು ಸಾಧ್ಯ. ಅಪೇಕ್ಷಿತ ವರ್ಗಾವಣೆ ಪಡೆಯುವ ಸಾಧ್ಯತೆ ಇದೆ. ಅನೇಕ ಹೊಸ ಹೂಡಿಕೆದಾರರು ಸಿಗುವರು. ತಾಯಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಉತ್ತಮ ವೈದ್ಯರ ಮೂಲಕ ಅವರಿಗೆ ಚಿಕಿತ್ಸೆ ನೀಡಿ. ಶುಭ: 11,18,22. ಅಶುಭ: 15,19,23.

**ಮಕರ:** ಆರೋಗ್ಯ ಸಂಬಂಧಿಸಿ ಅನೇಕ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಉತ್ತಮ ವೈದ್ಯರ ಸಲಹೆ ಅಗತ್ಯ. ಉದ್ಯೋಗಿಗಳಿಗೆ ವಿದೇಶ ಪ್ರಯಾಣದ ಅವಕಾಶ. ವ್ಯಾಪಾರಸ್ಥರಿಗೆ ಲಾಭ ಸಾಧ್ಯತೆ. ಸಮಾಜದಲ್ಲಿ ಗೌರವ ಮತ್ತು ಪ್ರತಿಷ್ಠೆ ಬೆಳೆಯುತ್ತದೆ. ಶುಭ: 13,18,28. ಅಶುಭ: 14,19,25.





**ಕುಂಭ:** ಕುಟುಂಬ ಸದಸ್ಯರಲ್ಲಿ ಸಹೋದರತೆ ಮತ್ತು ಒಗ್ಗಟ್ಟು ಹೆಚ್ಚಲಿದೆ. ಮನೆಯ ವಾತಾವರಣ ಸಂತೋಷದಿಂದ ಇರುತ್ತದೆ. ಕೆಲಸದ ಸ್ಥಳದಲ್ಲಿ ನೀವು ಸಂಪೂರ್ಣ ಯಶಸ್ಸು ಪಡೆಯುವಿರಿ. ಹಿರಿಯ ಅಧಿಕಾರಿಗಳಿಂದ ಬೆಂಬಲ ದೊರೆಯಲಿದೆ. ಶುಭ: 12,19,27. ಅಶುಭ: 10,16,29.

**ಮೀನ:** ಮನೆಗೆ ಅನುಗುಣವಾಗಿ ಖರ್ಚು ಮಾಡುವಿರಿ. ಇದರಿಂದ ಮನೆಯ ಸದಸ್ಯರ ನಡುವೆ ನಿಮ್ಮ ಗೌರವವು ಹೆಚ್ಚಲಿದೆ. ಸಹೋದ್ಯೋಗಿಗಳ ಸಹಾಯದಿಂದ ಅನೇಕ ಅವಕಾಶ ಪಡೆಯುತ್ತೀರಿ. ಹಿರಿಯ ಅಧಿಕಾರಿಗಳು ನಿಮ್ಮ ಬಡ್ತಿಯ ಬಗ್ಗೆ ಆಲೋಚಿಸಬಹುದು. ಶುಭ: 10,14,28. ಅಶುಭ: 12,19,27.

